Rotary
2025-26

ಮಿಡ್‌ಟೌನ್ ನ್ಯೂಸ್
# Midtown News

R.I. DISTRICT 3182 Zone-10 Club No. 21853 Charter Date : 16-05-1984
In House Bulletin of Rotary Club Shimoga Mid Town

R.I. President : Rtn. Francesco Arezzo
Dist. Governor : Rtn. Palaksha K.
Asst. Governor : Rtn. K.P. Shetty
President : Rtn. Harsha Kamath
Secretary : Rtn. Manjunath R.N.
Director : Rtn. Anil P. Shetty
Editor : Rtn. Anand I.R.
Co-Chairmen : Rtn. Narendra K.V.
Members : Rtn. Sreenag, Rtn. Raghupathi S., Rtn. K.V.L. Raju

We meet on 2nd, 3rd and 4th Thursday at Rotary Mid Town Hall, SHIVAMOGGA-577201 rotaryshimogamidtown@gmail.com

Vol. 42 8 - 1 - 2026 ISSUE 19

## Vocational Service Month

### ದಿನಾಂಕ 25-12-2025ರ ವಾರದ ಸಭೆಯ ವರದಿ

ದಿನಾಂಕ 25-12-2025ರ ವಾರದ ಸಭೆಯು ಕೌಟುಂಬಿಕ ಸ್ನೇಹ ಮಿಲನದ ಸಭೆಯಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷ ರೊ. ಹರ್ಷ ಬಿ. ಕಾಮತ್ ಇವರು ವಹಿಸಿದ್ದರು ಹಾಗೂ ಸಭೆಗೆ ಆಗಮಿಸಿದ್ದ ಎಲ್ಲಾ ರೋಟರಿ ಸದಸ್ಯರನ್ನು ಆಹ್ವಾನಿಸಿದರು.

ಸಭಾ ಕಾರ್ಯಕ್ರಮಕ್ಕೂ ಮುಂಚೆ ಈ ವರ್ಷದ ಮುಖ್ಯ ಯೋಜನೆಗಳಲ್ಲಿ ಒಂದಾದ ಗೋವರ್ಷ ಕಾರ್ಯಕ್ರಮದಡಿ ಪೂರ್ವಾಧ್ಯಕ್ಷರಾದ ರೊ. ಜಗ



ನ್ನಾಥ್ ಡಿ.ಎಂ. ಹಾಗೂ ಅವರ ಕುಟುಂಬದವರು ಎರಡು ಗೋವುಗಳನ್ನು ನಮ್ಮ ಕ್ಲಬ್ ಮುಖಾಂತರ ಫಲಾನುಭವಿಗಳಿಗೆ ಹಸ್ತಾಂತರಿಸಿದರು.

ಸಭೆಗೂ ಮುಂಚೆ ನೂತನ ಸದಸ್ಯರಿಗೆ ಪೂರ್ವಾ ಸಹಾಯಕ ಗವರ್ನರ್ ರೊ. ರಾಜೇಂದ್ರ ಪ್ರಸಾದ್ ಎಂ.ಆರ್. ಅವರು ಓರಿಯಂಟೇಷನ್ ಕಾರ್ಯಕ್ರಮವನ್ನು ನಡೆಸಿಕೊಟ್ಟಿದ್ದರು. ಕಾಂತರಾಜ್, ಭರತ್ ಎಸ್. ಮತ್ತು ರೂಪಾಲಿ ಅವರುಗಳಿಗೆ ನೂತನ ಸದಸ್ಯರಾಗಿ ಪ್ರಮಾಣ ವಚನ ನೀಡಲಾಯಿತು.

ರೊ. ಮುರಳಿ ಎಂ. ಮತ್ತು ರೊ. ಶಿಲ್ಪಾ ಹೆಚ್.ಜಿ. ಅವರುಗಳು ವಲಯ



## ವಾರದ ಸಭೆ

ದಿನಾಂಕ : **8-1-2026, ಗುರುವಾರ**

ಸಮಯ : **ಸಂಜೆ 7.30ಕ್ಕೆ**

ವಿಷಯ : **ಕ್ಲಬ್ ಅಫೇರ್ಸ್**

ಮಟ್ಟದ ಹಾಗೂ ಜಿಲ್ಲಾ ಮಟ್ಟದ ಕ್ರೀಡಾ ಕೂಟದಲ್ಲಿ ಭಾಗವಹಿಸಿ ಬಹುಮಾನ ಪಡೆದ ಸದಸ್ಯರು, ಆ್ಯನ್ಸ್,ಲಾರ್ಡ್ಸ್ ಮತ್ತು ಆ್ಯನೆಟ್ಸ್‌ಗಳ ಹೆಸರನ್ನು ಪ್ರಕಟಿಸಿ



ವೇದಿಕೆಗೆ ಆಹ್ವಾನಿಸಿ ಅವರನ್ನು ಅಧ್ಯಕ್ಷರು ಮತ್ತು ಪೂರ್ವಾಧ್ಯಕ್ಷರುಗಳ ಮುಖೇನ ಗೌರವಿಸಲಾಯಿತು.

ಅಂದು ಕ್ರಿಸ್‌ಮಸ್ ಹಬ್ಬದ ಪ್ರಯುಕ್ತ ರೊ. ಜೋಸೆಫ್ ಬಾಲರಾಜ್ ಮತ್ತು ರೊ. ತಂಗಚ್ಚನ್ ಕುಟುಂಬದವರು ಎಲ್ಲ ರೋಟರಿ ಕುಟುಂಬದವ



ರೊಂದಿಗೆ ಕೇಕ್ ಕತ್ತರಿಸುವು ಮುಖಾಂತರ ಕ್ರಿಸ್‌ಮಸ್ ಸಂಭ್ರಮವನ್ನು ಆಚರಿಸಿದರು.

ಕೊನೆಯಲ್ಲಿ ಕಾರ್ಯದರ್ಶಿಗಳಾದ ರೊ. ಆರ್.ಎನ್. ಮಂಜುನಾಥ್ ಇವರು ಎಲ್ಲರನ್ನು ವಂದಿಸಿ ಎಲ್ಲರನ್ನು ಭೋಜನಕ್ಕೆ ಆಹ್ವಾನಿಸಿದರು.





ದಿನಾಂಕ 27-12-2025ರಂದು ತುಂಗಭದ್ರ ಪ್ರೌಢಶಾಲೆಯ ಸಿ.ವಿ. ರಾಮನ್ ಇಂಟರ್ಯಾಕ್ಟ್ ಅಡಿಯಲ್ಲಿ ಆಯೋಜಿಸಲಾಗಿದ್ದ ಮಕ್ಕಳಿಗೆ ಬ್ಯಾಂಕಿಂಗ್ ಬಗ್ಗೆ ಮೂಲ ತರಬೇತಿ ಕಾರ್ಯಕ್ರಮವನ್ನು ಮಂಗಳೂರು ಕೇಂದ್ರ ಕಛೇರಿಯ ಹಿರಿಯ ಮ್ಯಾನೇಜರ್ ಆದ ಶ್ರೀ ರಮೇಶ್ ಎ. ಅವರು ಸಂಪನ್ಮೂಲ ವ್ಯಕ್ತಿಯಾಗಿ ನಡೆಸಿಕೊಟ್ಟರು. ನ್ಯೂ ಜನರೇಷನ್ ನಿರ್ದೇಶಕರಾದ ರೊ. ಶಿಲ್ಪಾ ಹೆಚ್.ಜಿ. ಅವರು ನಡೆಸಿದ ಪ್ರಶ್ನಾವಳಿ ಕಾರ್ಯಕ್ರಮದಲ್ಲಿ ಮಕ್ಕಳು ಉತ್ಸಾಹದಿಂದ ಭಾಗವಹಿಸಿ ಸಮಂಜಸವಾಗಿ ಉತ್ತರ ನೀಡಿದ ಮಕ್ಕಳಿಗೆ ಬಹುಮಾನವನ್ನು ವಿತರಿಸಲಾಯಿತು. ಆ್ಯನ್ ಆಶಾ ರಮೇಶ್‌ರವರು ಉಪಸ್ಥಿತರಿದ್ದರು.





ದಿನಾಂಕ 31-12-2025ರ ಬೆಳಿಗ್ಗೆ 10.00 ಗಂಟೆಗೆ ಐಕ್ಯಾ ಇಂಟರ್ಯಾಕ್ಟ್ ಕ್ಲಬ್, ಜೈನ್ ಪಬ್ಲಿಕ್ ಸ್ಕೂಲ್ ಇವರ ಆಶ್ರಯದಲ್ಲಿ ಹಾಗೂ ಸಂಸ್ಕಾರ ಭಾರತಿ ಅವರ ಸಹಯೋಗದಲ್ಲಿ “Be Calm, Be Aware”ಎಂಬ ಧ್ಯಾನ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಸದ್ಗುರು ಚಿಕಿತ್ಸಾಲಯದ ಡಾ. ರಂಜನಿ ಬಿದರಹಳ್ಳಿ ಅವರು ಆಗಮಿಸಿ ಧ್ಯಾನದ ಮಹತ್ವ, ಜಾಗೃತಿ ಹಾಗೂ ಮನಸ್ಸಿನ ಶಾಂತಿಯ ಬಗ್ಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ನ್ಯೂ ಜನರೇಷನ್ ನಿರ್ದೇಶಕರಾದ ರೊ. ಶಿಲ್ಪಾ ಹೆಚ್.ಜಿ. ಅವರು ಭಾಗವಹಿಸಿ ಅರ್ಥಪೂರ್ಣವಾಗಿ ನಡೆಸಿಕೊಟ್ಟರು.




ದಿನಾಂಕ 31-12-2025ರ ಮಧ್ಯಾಹ್ನ 3.00 ಗಂಟೆಗೆ ಸ್ಪಂದನ ಇಂಟರ್ಯಾಕ್ಟ್ ಕ್ಲಬ್, ದುರ್ಗಿಗುಡಿ ಸರ್ಕಾರಿ ಪ್ರೌಢಶಾಲೆ ಇವರ ಆಶ್ರಯದಲ್ಲಿ ಹಾಗೂ ಸಂಸ್ಕಾರ ಭಾರತಿ ಅವರ ಸಹಯೋಗದಲ್ಲಿ “The Key to Mental Wellness”ಎಂಬ ಧ್ಯಾನ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಸದ್ಗುರು ಚಿಕಿತ್ಸಾಲಯದ ಡಾ. ರಂಜನಿ ಬಿದರಹಳ್ಳಿ ಅವರು ಆಗಮಿಸಿ ಧ್ಯಾನದ ಮಹತ್ವ, ಜಾಗೃತಿ ಹಾಗೂ ಮನಸ್ಸಿನ ಶಾಂತಿಯ ಬಗ್ಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ನ್ಯೂ ಜನರೇಷನ್ ನಿರ್ದೇಶಕರಾದ ರೊ. ಶಿಲ್ಪಾ ಹೆಚ್.ಜಿ. ಅವರು ಭಾಗವಹಿಸಿ ಅರ್ಥಪೂರ್ಣವಾಗಿ ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಆ್ಯನ್ಸ್ ಕ್ಲಬ್ ಅಧ್ಯಕ್ಷೆ ರೊ. ಪವಿತ್ರ ಕಾಮತ್, ಪಬ್ಲಿಕ್ ಇಮೇಜ್ ನಿರ್ದೇಶಕರಾದ ರೊ. ಮೇನಕಾ ಜಗದೀಶ್, ರೊ. ಸುನೀತಾ ಚೇತನ್ ಭಾಗವಹಿಸಿದ್ದರು.






ದಿನಾಂಕ 2-1-2025ರ ಬೆಳಿಗ್ಗೆ 9.00 ಗಂಟೆಗೆ ಡಾ. ಸಿ.ವಿ. ರಾಮನ್ ಇಟರ್ಯಾಕ್ಟ್ ಕ್ಲಬ್, ತುಂಗ ಭದ್ರ ಪ್ರೌಢಶಾಲೆ, ಸೂಗೂರು ಮತ್ತು ಸಂಸ್ಕಾರ ಭಾರತಿ ಇವರ ಆಶ್ರಯದಲ್ಲಿ “Learning Art of Meditation”ಎಂಬ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಮುಖ್ಯ ವೈದ್ಯಾಧಿಕಾರಿಗಳಾದ ಡಾ|| ಕಾಂತರಾಜ್ ಟಿ.ಎಂ.ಅವರು ಆಗಮಿಸಿ, ಮಕ್ಕಳೊಂದಿಗೆ ಸಂವಾದಾತ್ಮಕ ಚಟುವಟಿಕೆಯನ್ನು ನಡೆಸಿದರು. ನ್ಯೂ ಜನರೇಷನ್ ನಿರ್ದೇಶಕರಾದ ರೊ. ಶಿಲ್ಪಾ ಹೆಚ್.ಜಿ. ಅವರು ವಿದ್ಯಾರ್ಥಿಗಳಿಗೆ ಉಪಯುಕ್ತ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಆ್ಯನ್ಸ್ ಕ್ಲಬ್ ಅಧ್ಯಕ್ಷೆ ರೊ. ಪವಿತ್ರ ಕಾಮತ್, ಪಬ್ಲಿಕ್ ಇಮೇಜ್ ನಿರ್ದೇಶಕರಾದ ರೊ. ಮೇನಕಾ ಜಗದೀಶ್ ಉಪಸ್ಥಿತರಿದ್ದರು.



**MARRIAGE ANNIVERSARY** *Greetings to*

Rtn. Shivashankar K.G. Dec-18
Ann. Revathi



**ANN BIRTHDAY** *Greetings to*

Ann. Madhumathi Narahari Dec-22
Ann. Nayana Ramesh G.C. Dec-25

Printed at : A.S.R. Offset Printers, #4, Dargah Complex, Tilak Nagar Main Road, SHIMOGA-577201, Ph : 278764







ದಿನಾಂಕ 2-1-2025ರ ಬೆಳಿಗ್ಗೆ 11.00 ಗಂಟೆಗೆ ಶ್ರೀ ಮಾರುತಿ ಇಟರ್ರ್ಯಾಕ್ಟ್ ಕ್ಲಬ್, ಮಾರುತಿ ಪ್ರೌಢಶಾಲೆ, ಹೊಳಲೂರು ಇವರ ಆಶ್ರಯದಲ್ಲಿ "Mind Fullness of Young Minds"ಎಂಬ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಮುಖ್ಯ ವೈದ್ಯಾಧಿಕಾರಿಗಳಾದ ಡಾ|| ಕಾಂತರಾಜ್ ಟಿ.ಎಂ. ಅವರು ಆಗಮಿಸಿ, ಮಕ್ಕಳೊಂದಿಗೆ ಸಂವಾದಾತ್ಮಕ ಚಟುವಟಿಕೆಯು ಅರ್ಥಪೂರ್ಣವಾಗಿ ಮೂಡಿ ಬಂದಿತು. ನ್ಯೂ ಜನರೇಷನ್ ನಿರ್ದೇಶಕರಾದ ರೊ. ಶಿಲ್ಪಾ ಹೆಚ್.ಜಿ. ಅವರು ವಿದ್ಯಾರ್ಥಿಗಳಿಗೆ ಉಪಯುಕ್ತ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಆ್ಯನ್ಸ್ ಕ್ಲಬ್ ಅಧ್ಯಕ್ಷೆ ರೊ. ಪವಿತ್ರ ಕಾಮತ್, ಪಬ್ಲಿಕ್ ಇಮೇಜ್ ನಿರ್ದೇಶಕರಾದ ರೊ. ಮೇನಕಾ ಜಗದೀಶ್ ಹಾಗೂ ಮಾರುತಿ ಇಂಟರ್ರ್ಯಾಕ್ಟ್ ಕ್ಲಬ್‌ನ ಸಂಯೋಜಕರಾದ ನಮ್ಮ ಕ್ಲಬ್ಬಿನವರೇ ಆದ ರೊ. ವೀಣಾ ವಿಶ್ವಾನಥ್‌ರವರು ಸಹ ಉಪಸ್ಥಿತರಿದ್ದರು.






ದಿನಾಂಕ 6-1-2026ರ ಬೆಳಿಗ್ಗೆ 11.00 ಗಂಟೆಗೆ ನಗರದ ಡಿ.ಸಿ. ಕಛೇರಿ ಆವರಣದಲ್ಲಿ ನಶಮುಕ್ತ ಸಮಾಜ ಎಂಬ ಶೀರ್ಷಿಕೆ ಅಡಿಯಲ್ಲಿ ನಡೆಸಲಿರುವ ಜನಜಾಗೃತಿ ಅಭಿಯಾನವು, ಶಿವಮೊಗ್ಗ ಜಿಲ್ಲೆಗೆ ನೂತನವಾಗಿ ಆಗಮಿಸಿರುವ ಜಿಲ್ಲಾಧಿಕಾರಿಗಳಾದ ಶ್ರೀ ಪ್ರಭುಲಿಂಗ ಕವಲಿಕಟ್ಟಿ ಮತ್ತು ನಗರದ ಶಾಸಕರಾದ ಶ್ರೀ ಚನ್ನಬಸಪ್ಪನವರು ಹಾಗೂ ನಗರದ ಹಲವಾರು ರೋಟರಿ ಸಂಸ್ಥೆಯ ಪದಾಧಿಕಾರಿಗಳು, ಸದಸ್ಯರು ಚಾಲನೆ ನೀಡಿದರು. ನಶಮುಕ್ತ ಶಿವಮೊಗ್ಗ ಎಂಬ ಸಂಕಲ್ಪಕ್ಕೆ ಸಂಘಟಿತ ರೂಪಕೊಟ್ಟು, ಯುವಜನತೆಯ ಭವಿಷ್ಯ, ಸಮಾಜದ ಒಳ ನೋವುಗಳನ್ನು ಅರಿತು ಪೋಲೀಸ್ ಇಲಾಖೆ, ಶಿಕ್ಷಣ ಸಂಸ್ಥೆಗಳು ಮತ್ತು ಸಾರ್ವಜನಕರು ಸಹಕರಿಸಬೇಕು ಎಂದು ಅಧ್ಯಕ್ಷರಾದ ರೊ. ಹರ್ಷ ಕಾಮತ್‌ರವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈ ಕಾರ್ಯಕ್ರಮದಲ್ಲಿ ಕ್ಲಬ್ಬಿನ ಸದಸ್ಯರುಗಳು ಸಕ್ರಿಯವಾಗಿ ಭಾಗವಹಿಸಿದ್ದರು.






Congratulations to
**Rtn. Aashrika Deepak Hegde**
for winning 2 Gold Medals in Swimming at the All India Masters Sports Championship held at Gachibowli Stadium Swimming Pool, Hyderabad.

Printed at : A.S.R. Offset Printers, #4, Dargah Complex, Tilak Nagar Main Road, SHIMOGA-577201, Ph : 278764